# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **66(671)** |
| **ಸದಸ್ಯರ ಹೆಸರು** | : | **ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | : | **22.07.2024** |
| **ಉತ್ತರಿಸುವ ಸಚಿವರು** | : | **ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಎಷ್ಟು ಆಯುಷ್ ಚಿಕಿತ್ಸಾಲಯಗಳಿವೆ; (ವಿವರ ನೀಡುವುದು). | ಆಯುಷ್ ಇಲಾಖೆಯಲ್ಲಿ ಬೆಂಗಳೂರು ನಗರ ಜಿಲ್ಲೆ& ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಒಟ್ಟು 23 ಚಿಕಿತ್ಸಾಲಯಗಳಿವೆ. ವಿವರ ಕೆಳಕಂಡಂತಿವೆ.<br>**ಬೆಂಗಳೂರು ನಗರ (ಜಿಲ್ಲಾ ವಲಯ)**<br>1. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಯಲಯಂಕ.<br>2. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಬ್ಯಾತ.<br>3. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಗಂಟಗಾನಹಳ್ಳಿ.<br>4. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಬನ್ನೇರುಘಟ್ಟ.<br>5. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ರಾಗಿಹಳ್ಳಿ.<br>6. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಸೋಮನಹಳ್ಳಿ.<br>7. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಮುಕ್ಕೋಡ್ಲು.<br>8. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಮಾಚೋಹಳ್ಳಿ.<br>9. ಸರ್ಕಾರಿ ಹೋಮಿಯೋಪಥಿ ಚಿಕಿತ್ಸಾಲಯ, ಹೆಬ್ಬಾಳ.<br>10. ಸರ್ಕಾರಿ ಯುನಾನಿ ಚಿಕಿತ್ಸಾಲಯ, ಜಯಮಹಲ್.<br>11. ಸರ್ಕಾರಿ ಯುನಾನಿ ಚಿಕಿತ್ಸಾಲಯ, ನೀಲಸಂದ್ರ.<br>**ಬೆಂಗಳೂರು ನಗರ (ರಾಜ್ಯ ವಲಯ)**<br>1.ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ,ಶಾಸಕರ ಭವನ.<br>2. ಸರ್ಕಾರಿ ಯುನಾನಿ ಚಿಕಿತ್ಸಾಲಯ,ಶಾಸಕರ ಭವನ.<br>3. ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯ,ಶಾಸಕರ ಭವನ.<br>4. ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಚಿಕಿತ್ಸಾಲಯ, ಶಾಸಕರ ಭವನ.<br>**ಬೆಂಗಳೂರು ಗ್ರಾಮಾಂತರ (ಜಿಲ್ಲಾ ವಲಯ)**<br>1. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಕೋಡಿಹಳ್ಳಿ.<br>2. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಕೋಲಿಗೆರೆ<br>3. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಹಣಬೆ.<br>4. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಮಂಟನಕುರ್ಚಿ.<br>5. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಯಂಟಗಾನಹಳ್ಳಿ.<br>6. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಹಗ್ಗನಹಳ್ಳಿ.<br>7. ಸರ್ಕಾರಿ ಹೋಮಿಯೋಪಥಿ ಚಿಕಿತ್ಸಾಲಯ, ಬೈರಸಂದ್ರ.<br>8. ಸರ್ಕಾರಿ ಯುನಾನಿ ಚಿಕಿತ್ಸಾಲಯ, ಇಸ್ಲಾಂಪುರ. |
| (ಆ) | ಆಯುಷ್ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸಮರ್ಪಕವಾಗಿ ಔಷಧಿಗಳು ದೊರೆಯದೆ ಇರುವುದರ ಬಗ್ಗೆ, ಸಾರ್ವಜನಿಕರಿಂದ ದೂರುಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು; | ಆಯುಷ್ ಮಂತ್ರಾಲಯವು ಭಾರತ ಸರ್ಕಾರವು ನಿಗದಿ ಪಡಿಸಿದ National List of Essential Ayush Medicines ನಲ್ಲಿ ಸೂಚಿಸಿರುವ ಔಷಧಿಗಳಾದ ದ್ರಾಕ್ಷಾಸವ, ತಿಫಲಾ ಚೂರ್ಣ, ಪಿಪ್ಪಲಿ ಚೂರ್ಣ, ಬ್ರಾಮ್ಹಿ ವಟಿ, ನವಾಯಸ ಲೋಹ, ಕಷಾಯ ಕಲ್ಪನಗಳು, ಆಸವ ಕಲ್ಪ, ಗುಟಿಕ ಕಲ್ಪನ, ಚೂರ್ಣ ಕಲ್ಪನ, ತೈಲ ಕಲ್ಪಗಳು ಇತ್ಯಾದಿಗಳನ್ನು ರಾಜ್ಯವಲಯ, ಜಿಲ್ಲಾ ವಲಯ ಮತ್ತು ರಾಷ್ಟ್ರೀಯ ಆಯುಷ್ ಅಭಿಯಾನದ ಯೋಜನೆಗಳಡಿ ಔಷಧಿಗಳಿಗಾಗಿ ನಿಗದಿಯಾದ ಅನುದಾನದಲ್ಲಿ ಆಸ್ಪತ್ರೆ /ಚಿಕಿತ್ಸಾಲಯಗಳಿಗೆ ಬೇಡಿಕೆಗನುಸಾರ ಕಾಲ ಕಾಲಕ್ಕೆ ನಿಯಮಾನುಸಾರ ಖರೀದಿಸಿ ಸರಬರಾಜು ಮಾಡಲಾಗಿದೆ. |

<table>
<tr><td></td><td></td><td>2023-24 ನೇ ಸಾಲಿನಲ್ಲಿ ಖರೀದಿಸಿರುವ ಮೊತ್ತದ ವಿವರ.<br>(ರೂ ಕೋಟಿಗಳಲ್ಲಿ)
<table>
<tr><td>ಜಿಲ್ಲಾ ವಲಯ</td><td>12.40</td></tr>
<tr><td>ರಾಜ್ಯವಲಯ</td><td>03.45</td></tr>
<tr><td>ರಾಷ್ಟ್ರೀಯ ಆಯುಷ್ ಅಭಿಯಾನ</td><td>28.55</td></tr>
<tr><td>ಒಟ್ಟು</td><td>44.40</td></tr>
</table></td></tr>
<tr><td>(ಇ)</td><td>ಆಯುಷ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ಸರ್ಕಾರಿ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು; ಮತ್ತು ಅವರಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ವೈದ್ಯರುಗಳ ಸಂಖ್ಯೆ ಎಷ್ಟು;</td><td>ಆಯುಷ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ಮಂಜೂರಾದ ವೈದ್ಯಾಧಿಕಾರಿಗಳ ಸಂಖ್ಯೆ 903, ಈ ಪೈಕಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ಸಂಖ್ಯೆ 677 ಮತ್ತು ಸ್ನಾತಕೋತ್ತರ ಪದವಿ ಪಡೆದಿರುವ ವೈದ್ಯಾಧಿಕಾರಿಗಳ ಸಂಖ್ಯೆ 158.</td></tr>
<tr><td>(ಈ)</td><td>ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರಿ ಆಯುಷ್ ಚಿಕಿತ್ಸಾಲಯವನ್ನು ತೆರೆಯಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; (ವಿವರ ನೀಡುವುದು)</td><td>ರಾಜ್ಯದಲ್ಲಿ ಈಗಾಗಲೇ 726 ಚಿಕಿತ್ಸಾಲಯಗಳು, 168 ಆಸ್ಪತ್ರೆಗಳು, 03-ಐವತ್ತು ಹಾಸಿಗೆಯುಳ್ಳ ಆಸ್ಪತ್ರೆಗಳು, 01 ಹೈ-ಟೆಕ್ ಪಂಚಕರ್ಮ ಆಸ್ಪತ್ರೆ ಹಾಗೂ 07 ಆಯುಷ್ ಕಾಲೇಜಿಗೆ ಹೊಂದಿಕೊಂಡ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿದ್ದು, ಬಹುತೇಕ ಎಲ್ಲಾ ವಿಧಾನಸಭಾ ವ್ಯಾಪ್ತಿಯಲ್ಲಿ ಆಯುಷ್ ಆಸ್ಪತ್ರೆಗಳು ಇರುತ್ತವೆ.</td></tr>
<tr><td>(ಉ)</td><td>ಸರ್ಕಾರಿ ಆಯುಷ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳು, ಸಿಬ್ಬಂದಿಗಳು ಗೈರು ಹಾಜರು ಆಗುತ್ತಿರುವ ಸಂಖ್ಯೆ ಎಷ್ಟು; ಅನಧಿಕೃತವಾಗಿ ಗೈರು ಹಾಜರು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ವಿವರ ನೀಡುವುದು)</td><td>ಸರ್ಕಾರಿ ಆಯುಷ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳು/ ಸಿಬ್ಬಂದಿಗಳು ದೈನಂದಿನ ಹಾಜರಾತಿಯನ್ನು ತಿಳಿದುಕೊಳ್ಳಲು ಹಾಗೂ ಮೇಲ್ವಿಚಾರಣೆ (Monitor) ಮಾಡಲು online ಮುಖಾಂತರ https://ayushlogin.in/login ಇ-ಹಾಜರಾತಿ ಪ್ರಕ್ರಿಯೆಯನ್ನು ಈಗಾಗಲೇ ಸಿದ್ಧಪಡಿಸಿದ್ದು, ಪ್ರತಿ ವೈದ್ಯರುಗಳು, ಸಿಬ್ಬಂದಿಗಳ ಅನಧಿಕೃತ ಗೈರು ಹಾಜರಾತಿಯ ಬಗ್ಗೆ ಕ್ರಮವಹಿಸಲಾಗುತ್ತಿದೆ. ಗೈರು ಹಾಜರಾಗಿದ್ದು ಕಂಡುಬಂದ ಪ್ರಕರಣಗಳಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ದೀರ್ಘಾವಧಿಯಿಂದ ಗೈರು ಹಾಜರಾಗಿರುವ 03 ಸಿಬ್ಬಂದಿಗಳನ್ನು ಅಮಾನತ್ತುಗೊಳಿಸಲಾಗಿದೆ.<br><br>ಆಗಸ್ಟ 01, 2024 ರಿಂದ ಜಾರಿಗೆ ಬರುವಂತೆ ಆರೋಗ್ಯ ಇಲಾಖೆಯ ಎಲ್ಲಾ ಅಧಿಕಾರಿ/ನೌಕರರ ಹಾಜರಾತಿಯನ್ನು ಮೊಬೈಲ್ ಆಪ್ ಮೂಲಕ ನಿರ್ವಹಿಸುವಂತೆ ಕಡ್ಡಾಯಗೊಳಿಸಲಾಗಿರುತ್ತದೆ.</td></tr>
</table>

**ಸಂಖ್ಯೆ: ಆಕುಕ 185 ಪಿಟಿಡಿ 2024**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು